**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 10834/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಅಂಬುಬಾಯಿ |
| ತಂದೆಃ ಗಂಡ | ಃ | ಚಿದಾನಂದ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಸಾವಳೇಶ್ವರ |

ದಿನಾಂಕಃ೨೬.೦೪.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ನನ್ನ ಭಾವ, ಚಾಸಾ-5 ನನ್ನ ನೆಗೆಣೆ, ಚಾಸಾ-2, 3 ರವರ ಪರಿಚಯ ಇರುತ್ತದೆ.

ಘಟನೆ ರಾತ್ರಿ 7.30 ಗಂಟೆಗೆ ನಡೆದಿರುತ್ತದೆ. ಆರೋಪಿ ನಾವು ಕಟ್ಟಿರುವ ಗೋಡೆಯನ್ನು ಒಡೆಯುತ್ತಿರುವ ಸಮಯದಲ್ಲಿ ಹಾರಿ ನನ್ನ ಕೈಗೆ ಬಡಿದಿರುತ್ತದೆ. ಆ ನಂತರ ನಾವು ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ. ಸಾಕ್ಷಿಯು ಪಿರ್ಯಾದಿಯಲ್ಲಿ ಇರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಆರೋಪಿತರು ನಮ್ಮ 2 ನೇ ಅಣ್ಣ ತಮ್ಮಕಿ ಆಗಬೇಕು, ಅವರ ಮನೆ ಮತ್ತು ನಮ್ಮ ಮನೆ ನಡುವೆ ಮೊದಲು ಒಂದೇ ಗೋಡೆ ಇತ್ತು. ಅದನ್ನು ತೆಗೆದು ನಮ್ಮ ಪಾಲಿಗೆ ಬರುವ ಜಾಗದಲ್ಲಿ ನಾವು ಗೋಡೆ ಕಟ್ಟಿರುತ್ತೇವೆ. ಕಟ್ಟಿದ ಗೋಡೆಯಲ್ಲಿ ಆರೋಪಿ ನನಗೂ ಪಾಲಿದೆ ಎಂದು ನಮಗೆ ಛತ್ತ ಹಾಕಲು ಬಿಟ್ಟಿರುವುದಿಲ್ಲ ಎಂದರೆ ಸರಿ. ಆರೋಪಿತರು ನನಗೆ ಅವಾಚ್ಯವಾಗಿ ಬೈದು ಕೈಯಿಂದ ಕಪಾಳಕ್ಕೆ ಮತ್ತು ಬೆನ್ನ ಮೇಲೆ ಹೊಡೆದರು ಎಂಥರೆ ಸರಿ. ಆರೋಪಿ ನಂ.೨ ನಮ್ಮದು ಬಹಳ ಆಗಿದೆ ಎಂದು ಅವಾಚ್ಯವಾಗಿ ಬೈದನು ಎಂದರೆ ಸರಿ. ಆರೋಪಿ ನಂ.೧ರವರ ಮಗ ಮಾಳಪ್ಪ ಬಂದು ನಮ್ಮದು ಬಹಳ ಆಗಿದೆ ಎಂದು ಒಂದು ಕೈ ನೊಡಕೋಬೇಕು ಎಂದು ಜೀವ ಬೆದರಿಕೆ ಹಾಕಿದ ಎಂದರೆ ಸರಿ. ಚಾಸಾ-4 ಮತ್ತು 5 ರವರು ಜಗಳ ಬಿಡಿಸಿದರು ಎಂದರೆ ಸರಿ. ಆರೋಪಿತರ ವಿರುದ್ದ ದಿ.23.09.2021 ರಂದು ಹಿರಿಯರೊಂದಿಗೆ ವಿಚಾರ ಮಾಡಿ ಫಿರ್ಯಾದಿ ನೀಡಿರುತ್ತೇನೆ ಎಂದರೆ ಸರಿ. ಆರೋಪಿ ನಂ.೧ ರವರ ಮಗ ಮಾಳಪ್ಪ ಹೊಡೆ ಬಡೆ ಮಾಡಿರುವುದಿಲ್ಲ ಎಂದು ನಾನು ದಿ.24.09.2021 ರಂದು ಮರು ಹೇಳಿಕೆ

ನೀಡಿರುತ್ತೇನೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮಾಳಪ್ಪ ಅವಾಚ್ಯವಾಗಿ ಬೈದು ಜೀವಬೆದರಿಕೆ ಹಾಕಿರುತ್ತಾನೆ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ</u>**

ಮೊದಲು ಇದ್ದ ಗೋಡೆ ಹಿರಿಯರ ಕಾಲದಿಂದಲೂ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರ್ಧ ಕಟ್ಟಿದ್ದೇವೆ ಇನ್ನು ಅರ್ಧ ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ. ಈ ಮೊದಲಿನ ಗೋಡೆ ಸಾಮೂಹಿಕವಾಗಿ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾವು ಈಗ ಕಟ್ಟಿರುವ ಗೋಡೆ ಅರ್ಧ ಬಿಟ್ಟು ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಮೊದಲು ಕಟ್ಟಿದ ಗೋಡೆ 30 ಇಂಚಿನ ಗೋಡೆ ಇರುತ್ತದೆ, ನಾವು ಈಗ 14 ಇಂಚಿನ ಗೋಡೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 30 ಇಂಚಿನ ಗೋಡೆಯನ್ನು ಕಟ್ಟಿ 14 ಇಂಚಿನ ಗೋಡೆಯನ್ನು ಕಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ಸದರಿ ಗೋಡೆಯಲ್ಲಿ ನಮಗೂ ಅರ್ಧ ಛತ್ತ ಹಾಕಲು ಬಿಡಿ ಎಂದು ಕೇಳಿದರು, ಆಗ ನೀವೇ ಅವರಿಗೆ ಹೊಡೆ ಬಡೆ ಮಾಡಿರುತ್ತೀರಿ ಎಂಧರೆ ಸಾಕ್ಷಿಯು ಗೋಡೆಯ ಮೇಲೆ ಬಂದು ಆರೋಪಿ ನಂ.೧ ಮಲಗಿರುತ್ತಾಳೆ, ಮತ್ತು ಛತ್ತ ಹಾಕಲು ಹಾಕಿರುವ ಸಿಮೆಂಟ ಮಾಲನ್ನು ತೆಗೆದುಹಾಕಿರುತ್ತಾಳೆ. ನಮ್ಮ ಮನೆಯಲ್ಲಿರುವ ಗಂಡು ಮಕ್ಕಳು ಯಾರೂ ಹೊಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ಓದಲು ಬರೆಯಲು ಬರುವುದಿಲ್ಲ. ಯಾವ ತಾರೀಖಿನಂದು ಘಟನೆ ಆಗಿದೆ ಎಂದು ನನಗೆ ನೆನಪಿಲ್ಲ. ಘಟನೆ ನಡೆಯುವ ಸಮಯದಲ್ಲಿ ಒಟ್ಟು ನಾಲ್ಕು ಜನ ಇದ್ದರು, ಚಾಸಾ-4, 5 ಮತ್ತು ನಿರ್ಮಲಾ, ಸೋನಾಬಾಯಿ ರವರು ಇದ್ದರು. ಆರೋಪಿ ನಂ.೨ ಘಟನೆ ನಡೆದ ಸಮಯದಲ್ಲಿ ಇರಲಿಲ್ಲ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮನೆಯಲ್ಲಿದ್ದನು ಅವಾಚ್ಯವಾಗಿ ಬಯ್ಯುತ್ತಿದ್ದನು ಎಂದು ನುಡಿಯುತ್ತಾರೆ. ನಾನು ಘಟನೆ ನಡೆದ ಸಮಯದಲ್ಲಿ ಛತ್ತಿನ ಮೇಲೆ ನಿಂತಿದ್ದೆನು. ಘಟನೆ ನಡೆದ ಮರುದಿನ ನಾನು ಮತ್ತು ಚಾಸಾ-4 ಪೋಲಿಸ್ ಠಾಣೇಗೆ ಹೋಗಿರುತ್ತೇವೆ. ನಾನು ಹೇಳಿದ ಹಾಗೆ ಪೋಲಿಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ನಿಪಿ-೧ನ್ನು ನಾನು ಹೇಳಿದ ಹಾಗೆ ಬರೆದ ನಂತರ ಪೋಲಿಸರು ನನಗೆ ಓದಿ ಹೇಳಿರುತ್ತಾರೆ.

ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲಿಸಿರುತ್ತಾರೆ ಎಂಧರೆ ಸರಿ. ಅದರ ಸಂಖ್ಯೆ ಸಿ.ಸಿ. ನಂ.6412/2022 ಗುನ್ನೆ ನಂ. 9/2022 ಇರುತ್ತದೆ ಎಂದರೆ ಸರಿ. ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲಿಸಿದ್ದಾರೆ ಎಂದು ನಾವು ಖೊಟ್ಟಿ ಪ್ರಕರಣವನ್ನು ಅವರ ಮೇಲೆ ದಾಖಲಿಸಿರುತ್ತೇವೆ ಎಂಧರೆ ಸರಿ ಅಲ್ಲ.

ಘಟನೆ ಆದ 4 ದಿನದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದು ನೋಡಿ ಹೋಗಿರುತ್ತಾರೆ. ಆರೋಪಿತರು ಮತ್ತು ನಮ್ಮ ನಡುವೆ ಗೋಡೆಯ ಸಲುವಾಗಿ ವೈಮನಸ್ಸಿದೆ ಎಂಧರೆ ಸರಿ. ಧರ್ಮರಾಜ ನನ್ನ ಮಗ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಚಾಸಾ-4 ರವರ ಮಗ ಎಂದು ನುಡಿಯುತ್ತಾರೆ. ಈ ದ್ವೇಷದಿಂದ ಧರ್ಮರಾಜ ಆರೋಪಿತರ ಮೊಮ್ಮಗಳನ್ನು ಅಪಹರಣ ಮಾಡಿ ಅತ್ಯಾಚಾರ

ಮಾಡಿರುತ್ತಾನೆ ಎಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ, ಈಗ ಸದರಿ ಧರ್ಮರಾಜ ಜೈಲಿನಲ್ಲಿರುತ್ತಾನೆ ಎಂದರೆ ಸರಿ.

ಆರೋಪಿತರು ನನ್ನ ಮೇಲೆ ಪ್ರಕರಣವನ್ನು ದಾಖಲಿಸಿದ್ದ ಕಾರಣ ಅವರನ್ನು ಹೆದರಿಸಲು ನಾನು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂಧರೆ ಸರಿ ಅಲ್ಲ. ನಾನು ಯಾವುದೇ ಫಿರ್ಯಾದಿಯನ್ನು ಸಲ್ಲಿಸದೇ ಇದ್ದರೂ ಫಿರ್ಯಾದಿಯನ್ನು ಸಲ್ಲಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ. ನಾನು ಘಟನೆ ಆದ ನಂತರ ಆಸ್ಪತ್ರೆಗೆ ತೋರಿಸಿಕೊಂಡಿರುವುದಿಲ್ಲ.

ಘಟನೆ ರಾತ್ರಿ 7.30 ಗಂಟೆಗೆ ನಡೆದಿರುತ್ತದೆ, ಆರೋಪಿ ನಾವು ಕಟ್ಟಿರುವ ಗೋಡೆಯನ್ನು ಒಡೆಯುತ್ತಿರುವ ಸಮಯದಲ್ಲಿ ಹಾರಿ ನನ್ನ ಕೈಗೆ ಬಡಿದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂಧರೆ ಸರಿ ಅಲ್ಲ.

ಆರೋಪಿತರು ನಮ್ಮ 2ನೇ ಅಣ್ಣ ತಮ್ಮಕಿ ಆಗಬೇಕು, ಅವರ ಮನೆ ಮತ್ತು ನಮ್ಮ ಮನೆ ನಡುವೆ ಮೊದಲು ಒಂದೇ ಗೋಡೆ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂಧರೆ ಸರಿ ಅಲ್ಲ. ಅದನ್ನು ತೆಗೆದು ನಮ್ಮ ಪಾಲಿಗೆ ಬರುವ ಜಾಗದಲ್ಲಿ ನಾವು ಗೋಡೆ ಕಟ್ಟಿರುತ್ತೇವೆ, ಕಟ್ಟಿದ ಗೋಡೆಯಲ್ಲಿ ಆರೋಪಿ ನನಗೂ ಪಾಲಿದೆ ಎಂದು ನಮಗೆ ಛತ್ತ ಹಾಕಲು ಬಿಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂಧರೆ ಸರಿ ಅಲ್ಲ. ಆರೋಪಿತರು ನನಗೆ ಅವಾಚ್ಯವಾಗಿ ಬೈದು ಕೈಯಿಂದ ಕಪಾಳಕ್ಕೆ ಮತ್ತು ಬೆನ್ನ ಮೇಲೆ ಹೊಡೆದರು, ಆರೋಪಿ ನಂ.೨ ನಮ್ಮದು ಬಹಳ ಆಗಿದೆ ಎಂದು ಅವಾಚ್ಯವಾಗಿ ಬೈದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ರವರ ಮಗ ಮಾಳಪ್ಪ ಬಂದು ನಮ್ಮದು ಬಹಳ ಆಗಿದೆ ಎಂದು ಒಂದು ಕೈ ನೊಡಕೋಬೇಕು ಎಂದು ಜೀವ ಬೆದರಿಕೆ ಹಾಕಿದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂಧರೆ ಸರಿ ಅಲ್ಲ. ಚಾಸಾ-4 ಮತ್ತು 5 ರವರು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ